# ಅರ್ಥ್ : ಅರ್ಥವಂತಿಕೆಯ ಆರೋಗ್ಯ ಕೇಂದ್ರ

ಪುರಾತನ ಭಾರತೀಯ ವೈದ್ಯಪದ್ಧತಿ ಆಯುರ್ವೇದ. ಅಥರ್ವಣ ವೇದದಲ್ಲಿ ಈ ಆಯುರ್ವೇದ ಶಾಸ್ತ್ರವು ಅಡಗಿದೆ. ಬ್ರಹ್ಮದೇವ ಈ ಶಾಸ್ತ್ರದ ಅವತರಣಕ್ಕೆ ಮೂಲ ಪುರುಷ. ಆಯು ಮತ್ತು ವೇದ ಎರಡು ಸಂಸ್ಕೃತ ಪದಗಳ ಸಮ್ಮಿಲನವೇ ಇದು. ಆಯು ಎಂದರೆ ಜೀವವೇದ ಎಂದರೆ ಶಾಸ್ತ್ರ ಆರೋಗ್ಯ ರಕ್ಷಣೆ.

ಆಯುರ್ವೇದ ಅವತರಣವನ್ನು ಗಮನಿಸಿದರೆ ಬ್ರಹ್ಮ, ದಕ್ಷಪ್ರಜಾಪತಿ, ಅಶ್ವಿನಿಕುಮಾರು, ಇಂದ್ರ ದೈವ ಪರಂಪರೆ, ಭಾರದ್ವಾಜ ಮನುಷ್ಯ ಪರಂಪರೆ, ಆತ್ರೇಯಸಂಪ್ರದಾಯ, ಅಗ್ನಿವೇಶ, ಭೇಲಾ, ಹರೀಶ, ಜತುಕರ್ಣ, ಪರಾಶರ, ಕ್ಷಾರಪಾಣಿ, ಧನ್ವಂತರಿ, ಧ್ವನಂತರಿ, ಸಂಪ್ರದಾಯ, ಸುಶ್ರುತ, ಔಪದೇನವ, ಕರವೀರ, ವೈತರಣ, ಔರಭ್ರ, ಪೌಷ್ಕಲಾವತ, ಗೋಪುರ, ರಕ್ಷಿತ ಈ ತಳಹದಿಯಲ್ಲಿ ಆಯುರ್ವೇದ ಚಿಕಿತ್ಸಾ ಪದ್ಧತಿ ಜನತೆಗೆ ಪೂರಕವಾಗಿದೆ.

ಅರ್ಥ್ ಅಂದರೆ ಆತ್ರೇಯ ರಿಸಾರ್ಟ್ಸ್ ಫಾರ್ ಟ್ರೆಡಿಷನಲ್ ಹೀಲಿಂಗ್ ವಿಶಿಷ್ಟ ಆರೋಗ್ಯ ಕೇಂದ್ರವಾಗಿ ರೂಪುಗೊಂಡಿದೆ. ಡಾ.ಸಂಜಯ್ ಶರ್ಮ, ಡಾ.ಪ್ರಶಾಂತ್, ಡಾ.ವೇಣುಗೋಪಾಲ್, ಡಾ.ರಜತ್ ಯುವ ವೈದ್ಯರುಗಳು ಸಾಹಸ ಗಾಥದ ಫಲಶ್ರುತಿ ಅರ್ಥ್!

ಬೆಂಗಳೂರಿನ ಇಂದಿರಾನಗರ ಹೆಚ್.ಎ.ಎಲ್. ಎರಡನೇ ಹಂತದಲ್ಲಿ ರೂಪಗೊಂಡಿರುವ ಸುಸಜ್ಜಿತ ಆಯುರ್ವೇದ ಆರೋಗ್ಯಕೇಂದ್ರ. ಮೂರು ತಿಂಗಳ ಸಾಂಪ್ರದಾಯಿಕ ಬಾಣಂತನ ಮಾಡಿ ತಾಯಿ ಮತ್ತು ಮಗುವನ್ನು ಎಲ್ಲ ವಿಧಗಳಲ್ಲೂ ಆರೋಗ್ಯ ಪೂರ್ಣರನ್ನಾಗಿ ಪೋಷಿಸಿ ಹಾರ್ದಿಕವಾಗಿ ಕಳುಹಿಸಿಕೊಡುವ ತವರು ಮನೆಯ ಪಾತ್ರ ವಹಿಸುತ್ತದೆ. ಅರ್ಥ್ ಚಿಕ್ಕ ಕುಟುಂಬಗಳಲ್ಲಿ ಬಿಡುವಿರದ ವ್ಯಕ್ತಿಗಳು, ಹಿರಿಯರ ಅನುಪಸ್ಥಿತಿ ಅಥವಾ ಸೇವಾ ಮನೋಭಾವವಿರದ ಹಿರಿಯರು ಮನೆಯ ಯಾವುದೇ ಸಮಸ್ಯೆಗಳಿಂದ ಅನಿವಾರ್ಯವಾಗಿ ವಂಚಿತರಾಗಿರುವವರಿಗೆ 'ಅರ್ಥ್' ಸಹಾಯ ಹಸ್ತ ನೀಡುತ್ತದೆ.



ವೇಳೆಗೆ ಸರಿಯಾಗಿ ಅಭ್ಯಂಜನ ಸ್ನಾನ, ಧೂಪ ಹಾಕಿ ತಲೆ ಕಾಯಿಸುವಿಕೆ, ಮೈಗೆ ಬಜೆ, ಅರಿಸಿನ ಲೇಪನ, ಊಟದಲ್ಲಿ ತುಪ್ಪ, ಮೆಣಸು, ಬೆಳ್ಳುಳ್ಳಿಯ ಬಳಕೆ, ಅಂಟಿನುಂಡೆ, ಮುಂತಾದ ಸಂಪ್ರದಾಯಬದ್ಧ ಉಪಚಾರ, ಕಣ್ಣುಉರಿ, ತಲೆನೋವು, ಬೆನ್ನುನೋವು, ಇಂಥ ಸಾಧಾರಣ ಕಾಯಿಲೆಗಳಿಂದ ಆರಂಭವಾಗಿ ವಾಸಿಯಾಗದ ಕಾಯಿಲೆ ಎಂದು ತೀರ್ಮಾನಿತವಾಗಿರುವ ತೊಂದರೆಗಳಿಗೂ ಉಪಶಮನ ಇಲ್ಲಿದೆ.

ಸಲಹಾ ಕೋಣೆ, ಸಂದರ್ಶನ ಕೋಣೆ, ಪಂಚಕರ್ಮ ಕ್ರಿಯೆಗಳಿಗೆ ಬೇಕಾಗುವ ಹಬೆ, ಸ್ನಾನಗೃಹ, ಶಿರೋಧಾರ ನೀಡುವ ಕೊಠಡಿ, ಮುಖ ಕಾಂತಿಗೆ ಚಿಕಿತ್ಸೆ ನೀಡುವ ನವನವೀನ ಕಾಸ್ಮೆಟಾಲಜಿಯ ಕೋಣೆ, ಸೂರ್ಯಕಿರಣ ಶಾಖಕ್ಕೆ ಒಳಪಡಿಸುವ ಕೋಣೆ, ಧ್ಯಾನಮಂದಿರ, ಬಾಣಂತಿ ಮಗುವಿಗೆ ಪ್ರತ್ಯೇಕ ಕೋಣೆಗಳು, ಮಗುವನ್ನು ಕಾಲಮೇಲೆ ಮಲಗಿಸಿಕೊಂಡು ಸ್ನಾನ ಮಾಡಿಸಲು ಮಾದರಿ ನೀಳ ಬಾತ್‌ಟಬ್, ನಾರು-ಬೇರುಗಳನ್ನು ಹಾಕಿ ಕುದಿಸುವ ಹಂಡೆಗಳು, ಹಳೆ ಮತ್ತು ಆಧುನಿಕ ಎಲ್ಲ ಸೌಲಭ್ಯಗಳೊಂದಿಗೆ ನುರಿತ ವೈದ್ಯರ ಸೇವಾ ಕೈಂಕರ್ಯ, ಜೊತೆಗೆ ಗ್ರಂಥಾಲಯ, ವಿಶ್ರಾಂತ ಕೋಣೆಗಳು. ಹೊರ ರೋಗಿಗಳಿಗೆ ತಂಗಲು ಸುಸಜ್ಜಿತ ಕೋಣೆಗಳು, ಟ್ರಾವೆಲ್ಸ್ ಪ್ಯಾಕೇಜ್, ವಿದೇಶಿ ರೋಗಿಗಳಿಗೆ ಜೆಟ್‌ಲ್ಯಾಗ್ ಜೊತೆಗೆ ಕಾಸ್ಮೆಟಾಲಜಿ, ರೆಜುವಿನೇಷನ್, ಸ್ವಸ್ಥ ಆರೋಗ್ಯ ರಕ್ಷಣೆ, ಇನ್‌ಫರ್ಟಿನಿಟಿ ಸಮಸ್ಯೆ, ಪೈಲ್ಸ್, ಕಿಡ್ನಿಯಲ್ಲಿ ಕಲ್ಲು, ರೇಖಿ ಮುಂತಾದ ಸೇವಾ ಸೌಲಭ್ಯ ಹೊಂದಿರುವ ಆರೋಗ್ಯ ಕೇಂದ್ರ.

"ನವೀನ ಮಾದರಿಯ ಅರ್ಥ್ ಸಂಪೂರ್ಣ ಸೇವಾ ಆರೋಗ್ಯಕೇಂದ್ರ. ಕರ್ನಾಟಕದಲ್ಲಿಯೇ ಎರಡನೆಯದು" ಎಂದು ಆತ್ಮವಿಶ್ವಾಸದಿಂದ ವಿವರಿಸುವ 28ರ ಹರೆಯದ ಡಾ.ಸಂಜಯ್ ಶರ್ಮ ಆಯುರ್ವೇದ ಚಿಕಿತ್ಸಾ ಪದ್ಧತಿ ಮಂದಗತಿಯದು ಎಂಬ ಮಾತನ್ನು ಸಂಪೂರ್ಣವಾಗಿ ತಳ್ಳಿಹಾಕುತ್ತಾರೆ. ಅರ್ಥ್‌ನಲ್ಲಿ ಚಿಕಿತ್ಸೆ ಪಡೆಯುವವರಿಗೆ ಕಡಿಮೆ ಅವಧಿಯಲ್ಲಿ ಶೀಘ್ರ ಆರೋಗ್ಯ ಲಭ್ಯ ಎನ್ನುತ್ತಾರೆ.